ಸಿ.ಸಿ..ನಂ.269-22

ಪಿ.ಡಬ್ಲ್ಯೂ-1

ದಿನಾಂಕ.09-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ಈ ಪರಕಣದಲಿಲರುವ ಆರೋಪಿಯು ಇದರಲ್ಲಿ ಕಾಣಿಸಿದ ಪ್ರಕರಣಕ್ಕೆ ಜಾಮಿನುದಾರರು ಆಗಿರುತ್ತಾರೆ. ಸಾಲಗಾರರು ನಾಗರಾಜ ವಿಠೊಬಾ ಬಾನಾವಳಿಕರ ಆಗಿರುತ್ತಾರೆ. ನಾಗರಾಜ ಬಾನಾವಳಿಕರ ರವರು ಆ ಸಮಯದಲ್ಲಿ ಸ್ವಂತ ಬೋಟವನ್ನು ನಡೆಸುತ್ತಿದ್ದರು. ಬೋಟಿಗೆ ಸಂಬಂಧಿಸಿದಂತೆ ಆರ್ ಸಿ ಇರುತ್ತದೆ ಎಂದರೆ ಹೌದು . ಈ ಪ್ರಕಣಕ್ಕೆ ಸಂಬಂಧಿಸಿದಂತೆ ಸದ್ರಿ ನಾಗರಾಜ ರವರ ಬೋಟಿನ ಆರ್ ಸಿ ಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಹೌದು. ಸದ್ರಿ ಸಾಲವು ವಾಹನದ ಸಾಲವಾಗಿರುತ್ತದೆ . ಸದ್ರಿ ಸಾಲವನ್ನು ಬೋಟವನ್ನು ಖರೀಸಲು ಪಡೆದುಕೊಂಡ ಸಾಲವಾಗಿರುತ್ತದೆ. ವಾಹನದ ಸಾಲವನ್ನು ಕೊಡಬೇಕಾದರೆ ಆ ವಾಹನದ quotation ವನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ಯಾವ ಕಂಪನಿಯಿಂದ quotation ಬಂದಿರುತ್ತದೆ . ಆ ಕಂಪನಿಗೆ ಪಾವತಿ ಮಾಡಬೇಕಾಗುತ್ತದೆ ಎಂದರೆ ಆ ರೀತಿ ಅಲ್ಲ . ಸಾಲಗಾರನ ಬೇಡಿಕೆಯಂತೆ ಆ ಹಣವನ್ನು ಎಲ್ಲಿ ಜಮಾ ಮಾಡಬೇಕೊ ಅಲ್ಲಿ ಜಮಾ ಮಾಡುತ್ತೇವೆ . ಈ ಪ್ರಕರಣದಲ್ಲಿ quotation ವನ್ನು ಯಾವ ಕಂಪನಿಯಿಂದ ಪಡೆದುಕೊಂಡಿರುತ್ತೀರಿ ಎಂದರೆ ಆತನು ಹೊಸ ಬೋಟ ವನ್ನು ಖರೀದಿಸಿರಲಿಲ್ಲ . ಅದು ಸೆಕೆಂಡ ಹ್ಯಾಂಡ್ ಬೋಟ ವಾಗಿತ್ತು ಆ ಕಾರಣದಿಂದ ಅದರ ದರ ಪಟ್ಟಿ ತಂದು ಕೊಟ್ಟಿರುತ್ತಾರೆ . ಆ ದರ ಪಟ್ಟಿಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸಾಲಗಾರ ಯಾವ ರೀತಿಯಾಗಿ ಬೇಡಿಕೆ ಇಟ್ಟಿದ್ದ ಎಂದು ದಾಖಲೆ ಇರುತ್ತದೆಯಾ ಎಂದರೆ ಹೌದು. ಆತನು ಇಟ್ಟಿದ್ದ ಬೇಡಿಕೆ ಯನ್ನಾಗಲಿ ಅಥವಾ ದರ ಪಟ್ಟಿಯನ್ನಾಗಲಿ ನ್ಯಾಯಾಲಯದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಸರಿ. ಆತನು ತನ್ನ ಉಳಿತಾಯ ಖಾತೆಗೆ ಹಣವನ್ನು ಜಮಾ ಮಾಡಬೇಕೆಂದು ಬೇಡಿಕೆ ಇಟ್ಟಿದ್ದ . ನಾವು ಸಾಲದ ಹಣವನ್ನು ಉಳಿತಾಯ ಖಾತೆಗ ಜಮಾ ಮಾಡಿರುತೇವೆ . ನಾವು ಹಳೆ ಬೋಟಿನ ಆರ್ . ಸಿ ನೋಡಿರುತ್ತೇವೆ . ಅದು ಯಾರ ಹೆಸರಿಗೆ ಇತ್ತು ಎಂದು ನೆನಪಿಲ್ಲ . ಹೊಸ ವಾಹನವಾಗಲಿ ಹಳೆ ವಾಹವಾಗಲಿ ಆ ವಾಹನವನ್ನು

ಖರೀದಿ ಮಾಡಿದ ಮೇಲೆ ಖರೀದಿದಾರರ ಹೆಸರಿಗೆ ವಾಹನದ ದಾಖಲಾತಿ ಮತ್ತು ವರ್ಗಾವಣೆ ಆಗಬೇಕು ಎಂದರೆ ಸರಿ . ನೀವು ನಾಗರಾಜ ರವರ ಹೆಸರಿಗೆ ಆ ವಾಹನವು ವರ್ಗಾವಣೆ ಆಗಿರುತ್ತದೆಯಾ ಎಂಬ ಬಗ್ಗೆ ನೋಟಿಸು ಕೊಟ್ಟಿರುತ್ತೀರಾ ಎಂದರೆ ನೆನಪಿಲ್ಲ . ಸದ್ರಿ ಸೆಕೆಂಡ್ ಹ್ಯಾಂಡ್ ವಾಹನವು ನಾಗರಾಜ ಹೆಸರಿಗೆ ಆರ್ ಸಿ ವರ್ಗಾವಣೆ ಆಗಿರುತ್ತದೆಯೋ ಇಲ್ಲವೊ ಎಂದು ನೀವು ದಾಖಲಾತಿ ಯನ್ನು ನೋಡಿರುತ್ತೀರಾ ಎಂದರೆ ನಾನು ಅರ್ ಸಿ ನೋಡಿರುತ್ತೇನೆ . ಯಾವುದೇ ಆರ್ ಸಿ ಯಲ್ಲಿ ಹಿಂದಿನ ಮಾಲಿಕನ ಹೆಸರು ಮತ್ತು ಖರೀದಿದಾರರ ಹೆಸರು ಇರುತ್ತದೆ ಎಂದರೆ ನೆನಪಿಲ್ಲ . ನೀವು ವಾಹನಕ್ಕೆ ಸಂಬಂಧಿಸಿದಂತೆ ಸಾಲ ಕೊಟ್ಟ ಮೇಲೆ ಅದರ ಮೇಲೆ ಹೈಪೊಥಿಕೇಷನ್ ದಾಖಲಾತಿಯನ್ನು ತೆಗೆದುಕೊಳ್ಳುತ್ತೀರಿ ಎಂದರೆ ಸರಿ . ಸದ್ರಿ ಆರ್ ಸಿ ಮೇಲೆ ಆಗ ನಿಮ್ಮ ಸೊಸೈಟಿಯ ಹೆಸರು ದಾಖಲು ಆಗುತ್ತದೆ ಎಂದರೆಸರಿ . ನಾಗರಾಜ ರವರು ತೆಗೆದುಕೊಂಡ ಬೊಟಿನ ಮೇಲೆ ಹೈಪೊದಿ.ಕೆಷನ ತೆಗೆದುಕೊಂಡಿರುತ್ತೇವೆ . ಹೈಪೊಥಿಕೇಷನ್ ಕ್ರಿಯೇಟ ಮಾಡಿದ ಮೇಲೆ ಆತನ ಬೋಟನ್ನು ಮಾರಾಟ ಮಾಡುವ ಹಕ್ಕು ನಿಮಗೆ ಬರುತತದೆ ಎಂದರೆ ಆತನು ಸಾಲವನ್ನು ಮರು ಪಾವತಿ ಮಾಡದೆ ಇದ್ದಲ್ಲಿ ಆ ಬೋಟನ್ನು ಮಾರಾಟ ಮಾಡುವ ಹಕ್ಕು ಇರುತ್ತದೆ . ಈ ಪ್ರಕರಣದಲ್ಲಿ ನಾಗಾರಾಜ ಬಾನಾವಾಳಿಕರ ವರು ಮೊದ ಮೊದಲು ಸಾಲವನ್ನು ಮರು ಪಾವತಿ ಮಾಡುತ್ತಿದ್ದ ನಂತರದಲ್ಲಿ ಮಾಡಿಲ್ಲ . ಆತನು ಸಾಲವನ್ನು ಮರು ಪಾವತಿ ಮಾಡದೆ ಇದ್ದಾಗ ಆತನ ವಿರುದ್ದ ಕ್ರಮ ತೆಗೆದುಕೊಂಡಿರುತ್ತೇವೆ . ನೋಟಿಸನ್ನು ಜಾರಿ ಮಾಡಿರುತ್ತೇವೆ . ಮಾರಾಟ ಮಾಡುವ ಕ್ರಮ ತೆಗೆದುಕೊಂಡಿರುತ್ತೇವೆ. ಬೋಟ ಮಾರಾಟ ವಾಗಿರುತ್ತದೆ . ಅದು ರೂ 3,80,000/- ಹಣಕ್ಕೆ ಮಾರಾಟ ವಾಗಿರತ್ತುದೆ . ಆತನ ಮನವಿ

ಮೇರೆಗೆ ಸಧ್ಯ ಅಂದಾಜು ಒಂದು ವರ್ಷದ ಹಿಂದೆ ಆ ಬೋಟನ್ನು ಮಾರಾಟಕ್ಕೆ ಕೊಡಲಾಗಿರುತ್ತದೆ . ಅದನ್ನು ಯಾರು ಖರೀದಿ ಮಾಡಿರುತಾರೆ ಎಂದು ಹೆಸರು ನೆನಪಿಲ್ಲ. ಅದನ್ನು ಹರಾಜಿನಲ್ಲಿ ಖರೀದಿ ಮಾಡಲಾಗಿದೆ . ಹರಾಜು ಮಾಡುವಾಗ ಯಾವ ಪ್ರಕ್ರಿಯೆಯನ್ನು ಈ ಪ್ರಕರಣದಲ್ಲಿ ಪಾಲಿಸಿರುತ್ತೀರಿ ಎಂದರೆ ಆತನ ಮನವಿಯ ಮೇರೆಗೆ ಸಾರ್ವಜನಿಕ ಪ್ರಕಟಣೆ ನೀಡಿ ಬಹಿರಂಗ ಹರಾಜು ಮಾಡಲಾಗಿರುತ್ತದೆ . ಅವರು ನೀಡಿದ ಮನವಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ ಅದೇ ರೀತಿ ಸದ್ರಿ ಬೋಟ ರೂ

3,80,000/- ಗೆ ಮಾರಾಟ ಮಾಡಿದ್ದರ ಬಗ್ಗೆ ದಾಖಾಲತಿ ಯನ್ನು ನ್ಯಾಯಲಯದ ಮುಂದೆ ನೀಡಿಲ್ಲ ಎಂದರೆ ಸರಿ .

2. ಸಾಲ ಕೊಡುವಾಗ ಎಲ್ ಐಸಿ ಪಾಲಿಸಿ ಹಾಗೂ ಕ್ಯಾಶ ಸರ್ಟಿಫಿಕೇಟ್ , ಜಾಮಿನು ಬದ್ರತೆ ಹಾಗೂ ಬೋಟನ್ನು ಬದ್ರತೆಗೆ ಪಡೆದುಕೊಳ್ಳಲಾಗಿದೆ . ಕ್ಯಾಶ ಸರ್ಟಿಫಿಕೇಟ್ ರೂ 3 ಲಕ್ಷದಾಗಿದ್ದು ಅದು ಯಾರಿಗೆ ಸಂಬಧಿಸಿದ್ದು ಎಂದು ನೆನಪಿಲ್ಲ . LIC ಪಾಲಿಸಿ ನಾಗರಾಜ ಹೆಸರಿಗೆ ಇದ್ದವು . ಯಾವ ಸ್ವರೂಪದ LIC ಪಾಲಿಸಿ ಗಳು ಎಂದು ನೆನಪಿಲ್ಲ . LIC ಪಾಲಿಸಿಯಲ್ಲಿ money ಬ್ಯಾಕ್ ಪಾಲಿಸಿ ಇರುತ್ತದೆ ಎಂದರೆ ಸರಿ . Money ಬ್ಯಾಕ್ ಪಾಲಿಸಿ ಇದ್ದರೆ ನಿಮ್ಮ ಬ್ಯಾಂಕಿಗೆ ಬೊನಸ್ ಹಣವು ನಿಮ್ಮ ಸಂಸ್ದೆಗೆ ಬರುತ್ತದೆ ಎಂದರೆ ನಮ್ಮ ಸಂಸ್ಥೆ ಗೆ ಬೋನಸ ಹಣ ಬಂದಿದ್ದರ ಬಗ್ಗೆ ನೆನಪಿಲ್ಲ. ನಿಪಿ-7 ರಪ್ರಕಾರವಾಗಿ ಸಾಕಷ್ಟು insurance policy premium ಹಣ ಇರುತ್ತದೆ ಎಂದರೆ ಸರಿ .ಸಾಕ್ಷಿ ಪುನಃ ಅಷ್ಟೇ ಅಲ್ಲ ಆತನ ಬೋಟ insurance policy ಸಹ ಇರುತ್ತದೆ . ನಿಪಿ-7 ರಲ್ಲಿ United India insurance co. ಎಂದು ಇರುವುದು ಬೋಟ ಗೆ ಸಂಬಂಧಿಸಿದ insurance ಆಗಿರುತ್ತದೆ . ನೀವು ಬಡ್ಡಿಯನಲ್ಲು ಲೆಕ್ಕಾಚಾರ ಹಾಕುವಾಗ ಈ premium ಹಣ ಅಸಲಿಗೆ ಸೇರಿಸಿ ಬಡ್ಡಿ ಹಾಕಿ ಲೆಕ್ಕಾಚಾರ ಮಾಡುತ್ತೀರಾ ಎಂದರೆ ಹೌದು. ಚೆಕ ನಲ್ಲಿ ನಮೂದಿಸಿದ ದಿನಾಂಕದಂದು ಹಣ ಬರಬೇಕು ಎಂದು ನಿಪಿ-7 ರಲ್ಲಿ ಇರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಪುನಃ ಆತನು transaction ಮಾಡಿದರೆ ಮಾತ್ರ ಆ ಹಣ ನಿಪಿ-7 ರಲ್ಲಿ ಎಂಟ್ರಿ ಆಗುತ್ತದೆ . ಚೆಕ್ ನಮೂದಿಸಿದ ದಿನಾಂಕದಂದು ಚೆಕ್ ದಲ್ಲಿ ನಮೂದಿಸಿದ ಹಣ ನಿಮ್ಮ ಸಂಸ್ಥೆಗೆ ಬರಬೇಕು ಎಂದು ದಾಖಲಾತಿ ಇರುತ್ತದೆಯಾ ಎಂದರೆ ಹೌದು . ಅಸಲಿಗೆ ಬಡ್ಡಿ ಸೇರಿ ಸಿ ಎಷ್ಟು ಹಣ ಬರಬೇಕಾಗುತ್ತದೆ ಎಂದು ಲೆಕ್ಕಾಚಾರ ಮಾಡಿ ಕೊಟ್ಟಾಗ ಆರೋಪಿಯು ಅದಕ್ಕೆ ಚೆಕ್ ನ್ನು ಕೊಟ್ಟಿರುತ್ತಾನೆ . ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯು ಆ ಹಣಕ್ಕೆ ಸಂಬಂಧಿಸಿದಂತೆ ಚೆಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ-7 ರಲಿಲ ಕಾಣಿಸಿದ ಅಸಲಿನ ಹಣಕ್ಕೆ ಬಡ್ಡಿ ಸೇರಿದಾಗ ರೂ 17,01,000 ಅಗುತ್ತದೆಯಾ ಎಂದರೆ ಅದರಲ್ಲಿ ಅಸಲಿನ ಮೊತ್ತ ಮಾತ್ರ ನಮೂದು ಆಗಿರುತ್ತದೆ ಬರಬೇಕಾದ ಬಡ್ಡಿ ದಿನಾಂಕ ನಮೂದಿಸಲಾಗಿರುತ್ತದೆ . ಬಡ್ಡಿ ಲೆಕ್ಕಚಾರ ಕಂಪ್ಯೂಟರ ಮುಖಾಂತರ ಮಾಡುತ್ತೇವೆ. ಬ್ಯಾಂಕಿನ ವ್ಯವಹಾರದ ಎಲ್ಲಾ ವ್ಯವಹಾರಗಳು ದಾಖಲಾತಿ

ರೂಪದಲ್ಲಿ ಮತ್ತು ಕಂಪ್ಯುಟರ ದಲ್ಲಿ ಎಂಟ್ರಿ ಆಗಿರುತ್ತದೆ. ಬಡ್ಡಿ ಯನ್ನು ಲೆಕ್ಕಾಚಾರ ಹಾಕಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.